ಲೈಸೆನ್ಸು ಪಡೆದ ವೆಂಡರು ಯಾನೆ ಪುರೋಹ್ಯುದಾರರಿಗೆ ಬಿಕರೀ ಮಾಡುವ ಬಗ್ಗೆ ತಾಲ್ಲೂಕು ಟ್ರೆಜರಿಗಳಿಗೆ ಅಫೀಂ ಸರಬರಾಯಿ ಮಾಡುವದನ್ನು ಕುರಿತು.

ಬೆಂಗಳೂರು, ಕೋಲಾರ, ತುಮಕೂರು, ಮೈಸೂರು, ಕಡೂರು, ಮ ತ್ತು ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳಿಗೆ,

ಸರ್ಕ್ಯುಲರ್ ನಂಬರ್ 1643, ಮಲ್ಕುಂ 9 ನೇ ಡಿಸಂಬರ್ 1885ನೇ ಇಸವಿ.

ಸ್ ಸ 1885ನೇ ಇಸವಿ ಮಾರ್ಚಿ 18ನೇ ಮಲ್ಕುಂ 6865–75—149ನೇ ನಂಬರಿನವುಳ್ಳ ದಿವಾನರವರ ಪ್ರೊಸೀಡಿಂಗ್ಸಿನ 6ನೇ ಪ್ಯಾರಾ ಮತ್ತು ಆಫೀಷಿಯೆಟಿಂಗ್ ಅಂಡರ್ ಸೆಕ್ರೆಟೇರಿಯವರ ಮಾಹೆ ಗುಜಸ್ತಾ 23ನೇ ಮಲ್ಕುಂ 4625—306ನೇ ಲೆಟರ್ ಇವುಗಳನ್ನನುಸರಿಸಿ ಕಾಂಪ್ಟ್ರೋಲರ್‌ರವರು ತಿಳಿಸುವದೇನಂದರೆ, ಕೆಲವು ತಾಲ್ಲೂಕುಗಳಲ್ಲಿ ಸರಾಸರಿ ಖರ್ಚಾಗುವ ಅಫೀಂ ತೇದಾದಿನ ಅಂದಾಜು ಪಟ್ಟಿಯು ಇದರ ಬಾಜೂದಲ್ಲಿ ಕಾಣಿಸಲ್ಪಟ್ಟಿರುತ್ತೆ, ಆಯಾ ಡೆಪ್ಯುಟಿ ಕಮ್ಮಿಷನರುಗಳು, ಸದರೀ ತಾಲ್ಲೂಕು ಟ್ರೆಜರಿಗಳಲ್ಲಿ 3 ತಿಂಗಳು ಕಾಲಕ್ಕೆ ಖರ್ಚಿಗೆ ಬೇಕಾದಷ್ಟು ತೇದಾದು ಪ್ರತಿ ಟ್ರೆಜರಿಯಲ್ಲಿಯು ದಾಸ್ತಾನು ಇರುವ ಬಗ್ಗೆ ಸಾಕಾದಷ್ಟು ಅಫೀಮನ್ನು ತಾಲ್ಲೂಕು ಟ್ರೆಜರಿಗಳಿಗೆ ಸರಬರಾಯಿ ಮಾಡುವಂತೆ ಡಿಸ್ಟ್ರಿಕ್ಟ್ ಟ್ರೆಜರಿ ಆಫಿಸರುಗಳಿಗೆ ನಿಯಮಿಸತಕ್ಕದ್ದು. ದಾಸ್ತಾನು ಖಾಲಿ ಆಗುವದನ್ನು ತಪ್ಪಿಸುವದಕ್ಕೋಸ್ಕರ ಸರಬರಾಯಿ ಬಗ್ಗೆ ಹೊಜೂರು ಟ್ರೆಜರಿಗೆ ಸಕಾಲದಲ್ಲಿಯೇ ಥರಬಾಸ್ತು ಕಳುಹಿಸತಕ್ಕದ್ದು.

	ಹೆಡ್ ಸೂಪರ್‌ವೈಜರವರಿಂದ ತಿಳಿಸಲ್ಪಟ್ಟ ಪ್ರಕಾರ ತಿಂಗಳು 1ಕ್ಕೆ ಸರಾಸರಿ ಖರ್ಚು.	
ಬೆಂಗಳೂರು ಡಿಸ್ಟ್ರಿಕ್ಟು.	ಸೇರು.	ತೊಲ.
ಕ್ಲೋಸ್‌ಪೇಟೆ ತಾಲ್ಲೂಕು ..	12	0
ಕಾರ್ಕಾನಹಳ್ಳಿ „ ..	2	0
ಕೋಲಾರ ಡಿಸ್ಟ್ರಿಕ್ಟು.		
ಚಿಂತಾಮಣಿ ತಾಲ್ಲೂಕು ..	1	0
ಚಿಕ್ಕಬಳ್ಳಾಪುರ „ ..	4	0
ತುಮಕೂರು ಡಿಸ್ಟ್ರಿಕ್ಟು.		
ತಿಪಟೂರು ..	1	0
ಚಿತ್ರದುರ್ಗ ..	2	0
ಶಿವಮೊಗ್ಗಾ ಡಿಸ್ಟ್ರಿಕ್ಟು.		
ಹೊನ್ನಾಳಿ ..	4	0
ಶೀರ್ಥಹಳ್ಳಿ ..	1	0
ಕಡೂರು ಡಿಸ್ಟ್ರಿಕ್ಟು.		
ತರೀಕೆರೆ ..	4	0
ಹಾಸನ ..	3	0
ಮಂಜರಾಬಾದ್ (ಸಕ್ಲೇಶಪುರ) ..	4	0
ಮೈಸೂರು ಡಿಸ್ಟ್ರಿಕ್ಟು.		
ಶ್ರೀರಂಗಪಟ್ಟಣ ಮ ಫ್ರೆಂಚ್‌ರಾಕ್ಸ್ ..	7	0
ಪುಣಸೂರು ..	2	0
	47	0

2. ಆಮಲ್‌ದಾರರು ಇದಕ್ಕೆ ಲಗತ್‌ಮಾಡಿರುವ ನಮೂನೆಯಲ್ಲಿ ಒಂದು ರಿಜಿಸ್ಟರ್ ಇಡತಕ್ಕದ್ದು; ಮತ್ತು ಆದರಲ್ಲಿ ಕಂಜ ಳ್ಳು ತೇದಾದನ್ನು ಪ್ರತಿ ತಿಂಗಳ ಆಖೈರಿನಲ್ಲಿ ತೂಕ ಮಾಡಿ ದೃಢಪಡಿಸತಕ್ಕದ್ದು. ಅಮಲ್‌ದಾರರು ಡಿಸ್ಟ್ರಿಕ್ಟು ಟ್ರೆಜರಿಗೆ ಕ್ಯಾಷ್ ಅಕೌಂಟಿನ ವಡನೆ ತಿಂಗಳ ಆಖೈರ್ ತಾರೀಖಿನಲ್ಲಿ ಬಂದು ಪ್ಲಸ್ ಅಂಡ್ ಮೈನಸ್ ಮಿಮೊ ಯೂನೆ ಜವಾ ಖರ್ಚು ಪಟ್ಟಿಯನ್ನು ತಯಾರ್ಮಾಡಿ ಆದರಲ್ಲಿ ಹಿಂದಿನ ಳ್ಳು, ಜವೆ ಬಂದ ಅಫೀಮಿನ ತೇದಾದ್ ಮತ್ತು ಕಮ್ಮಿತ್ತು, ಸದರೀ ಮಾಹೆಯಲ್ಲಿ ಬಿಕರಿ ಮಾಡಲ್ಪಟ್ಟ ತೇದಾದ್ ಮತ್ತು ಹಾಜರಿರತಕ್ಕ ಶಿಲ್ಕು, ಇವುಗಳನ್ನು ನಮೂದ ಮಾಡಿ ಕಳುಹಿಸತಕ್ಕದ್ದು, ಅಲ್ಲದೆ ಆರಮಾಸಿಯಿಂದಲಾಗಲಿ ಕೆಟ್ಟು ಹೋಗುವದರಿಂದಲಾಗಲಿ ದಾಸ್ತಾನ್ ಕಮ್ಮಿ ಬಂದ ಸಂಗತಿ ತಪಶೀಲ್ ಕಾಣಿಸತಕ್ಕದ್ದು.

3. ಡಿಸ್ಟ್ರಿಕ್ಟು ಟ್ರೆಜರಿಯಲ್ಲಿ ಮಾಹೆವಾರಿ ಕ್ಯಾಷ್ ಅಕೌಂಟಿನೊಂದಿಗೆ ಕೇರಿಸತಕ್ಕ ಬಗ್ಗೆ ಪಟ್ಟು ಡಿಸ್ಟ್ರಿಕ್ಟಿನ ವಂದು ಜಮಾಖರ್ಚು ಪಟ್ಟಿಯು ತಯಾರ್ಮಾಡಲ್ಪಡತಕ್ಕದ್ದು, ಆದರಲ್ಲಿ ಸದರೀ ಜಮಾ ಖರ್ಚು ತಪಶೀಲ್‌ಗಳು ಡಿಸ್ಟ್ರಿಕ್ಟು ಟ್ರೆಜರಿಗೂ ಮ ತ್ತು ಪ್ರತಿ ತಾಲ್ಲೂಕು ಟ್ರೆಜರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ತೋರಿಸಲ್ಪಡತಕ್ಕದ್ದು. ತಾಲ್ಲೂಕು ಟ್ರೆಜರಿಗಳಲ್ಲಿ ಆರವಾಸಿಯಿಂದಲೂಕೆಟ್ಟು ಹೋಗುವದರಿಂದಲೂ ಕಮ್ಮಿಬಂದ ಅಫೀಮಿನ ತೇದಾದಿಗಾಗಿ ವಟ್ಟು ಡಿಸ್ಟ್ರಿಕ್ಟಿಗೆ ವಂದೇಬಿಲ್ಲು ತಯಾರ್ಮಾಡಿ ಬದಸ್ತೂ ಮ ತಪಶೀಲ್ ನಮೂದಿನಿಂದ ವ್ಯವಸ್ಥೆ ಬಗ್ಗೆ ಈ ಆಫೀಸ್ಕೆ ಕಳುಹಿಸಲ್ಪಡತಕ್ಕದ್ದು.

ಮೂಲವಾ ಅಫೀಂ ದಾಸ್ತಾನು ವ ಬಿಕರಿಬಾಬತು ಅಮಲ್ದಾರ್ ರಿಜಸ್ಟರ್.

ತಾರೀಖು.		ತಪಸೀಲು.	ತೇದಾದು.		ಕಿಮ್ಮತ್ತು.	ಅಮಲ್ದಾರ್ರ ರುಜು.
			ಸೇರು.	ತೋಲಾ.		
1885ನೇ ಡಿಸಂಬರ್.	1	ಹಾಜರಿರತಕ್ಕ ಸಿಲ್ಕು				
		ಡಿಸ್ಪೆನ್ಸರ್ಸಿ ಟ್ರೈಜರಿಯಿಂದ ಜಮಾ				
	5	ಪುರೋಹ್ತು ಜಮ್ಮಾ				
	"	" ಗೆ				
	10	ಡಿಸ್ಪೆನ್ಸರ್ಸಿ ಟ್ರೈಜರಿಯಿಂದ ಜಮಾ (ರೋಜೀನಾ) ಸಿಲ್ಕು				
	12	ಪುರೋಹ್ತು ಜಮ್ಮಾ				
	"	" ಗೆ				
		(ರೋಜೀನಾ) ಸಿಲ್ಕು				

ಹೆಚ್. ಹಡಿರ್ಕ್,
ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್‌ಜಡ್ಜ್ರೀಯವರ ಕೋರ್ಟಿನಲ್ಲಿ.

1885ನೇ ಇಸವಿ ಮಿಸಲೀನಿಯಸ್ ನಂಬರ್ 575.

ಮೃತಪಟ್ಟ ಆನೆಕೆರೆ ವೆಂಕಟಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಕಾಡಾಕಾನಪಳ್ಳಿ ಕಸಬಾ ವಾಸಸ್ಥ ಗೋಪಾಲಕೃಷ್ಣಯ್ಯ, ಮೃತಪಟ್ಟ ಸದರೀ ವೆಂಕಟಪ್ಪನು ತನಿಗೆ ತಂದೆಯಾಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ವಾಸಸ್ಥನಾಗಿ ಮೃತಪಟ್ಟ ಆನೆಕೆರೆ ವೆಂಕಟಪ್ಪನ ಜೆಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಲೇಷೆಯನ್ನು ವಸೂಲ್ಮಾಡಿ ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಕೊಡಿಸಬೇಕೆಂದು ಅರ್ಜೀದಾರನು ಈ ಕೋರ್ಟಿಗೆ ಬಾಯಿಷ್ ಮೂಡಿರುತ್ತಾನೆ.

ಸದರೀ ದರಖಾಸ್ತನ್ನು 1886ನೇ ಇಸವಿ ಜನವರೀ 8ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಆನೆಕೆರೆ ವೆಂಕಟಪ್ಪನ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಮಿಸಲೀನಿಯಸ್ ನಂಬರ್ 576.

ಮೃತಪಟ್ಟ ಜೋತೀನಗರದ ದಾಸಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಬೆಂಗಳೂರು ತಾಲ್ಲೂಕು ಕೆಂಗೇರಿಯಲ್ಲಿರುವ ದೊಡ್ಡಮುನಿಶಾಮಣ್ಣ, ಮೃತಪಟ್ಟ ಜೋತೀನಗರದ ದಾಸಪ್ಪನು ತನಿಗೆ ತಂದೆ ಆಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ವಾಸಸ್ಥನಾಗಿ ಮೃತಪಟ್ಟ ದಾಸಪ್ಪನ ಜೆಂದಗೀ ಬಗ್ಯಾಗಿ ಬರತಕ್ಕ 300 ರೂಪಾಯಿಗಳ